**ಭಾರತೀಯ ಅಂಚೆ ಇಲಾಖೆ**

**ವಿಜಯಪುರ ಅಂಚೆ ವಿಭಾಗ, ವಿಜಯಪುರ-586104**

# ಅಂಚೆ ಜೀವವಿಮೆ

## ಅಂಚೆ ಜೀವವಿಮೆಗೆ ಅರ್ಹರಾದವರು :-

- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರು
- ರಕ್ಷಣಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರು
- ಸರ್ಕಾರಿ ಅನುದಾನಿತ ಶಿಕ್ಷಣಸಂಸ್ಥೆ ಮತ್ತು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವವರು
- ಸ್ಥಳೀಯ ಸಂಸ್ಥೆಗಳಾದ ಮುನ್ಸಿಪಾಲಿಟಿ, ಜಿಲ್ಲಾ ಪರಿಷದ್ ಗಳಲ್ಲಿ ಕಾರ್ಯನಿರ್ವಹಿಸುವವರು
- ಹಣಕಾಸು ಸಂಸ್ಥೆಗಳಾದ IDBI, IFCI, IRCI, ICICI, UTI, LIC, RBI, GIC, ರಾಷ್ಟ್ರೀಕರಣಗೊಂಡ ಬ್ಯಾಂಕ್, ಗ್ರಾಮೀಣ ಬ್ಯಾಂಕಗಳಲ್ಲಿ ಕಾರ್ಯನಿರ್ವಹಿಸುವ ಕಾಯಂ ಉದ್ಯೋಗಿಗಳು.
- ಪ್ರಮಾಣಿಕರಿಸುವ ಸಂಸ್ಥೆಗಳಾದ Indian Standards Institutions, Council of Scientific and Industrial Research, Medical Council of India, Dental Council of India, Nursing Council of India, and Pharmacy Council of India ದಲ್ಲಿ ಕಾರ್ಯನಿರ್ವಹಿಸುವವರು.
- ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನಡೆಸುವ ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುವವರು.
- ಗ್ರಾಮೀಣ ಅಂಚೆ ನೌಕರರು
- ಕೇಂದ್ರ, ಮತ್ತು ರಾಜ್ಯ ಸರ್ಕಾರದ ವಿವಿದ ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು & ಅವರ ಗುತ್ತಿಗೆಯನ್ನು ವಿಸ್ತರಿಸಬಹುದಾದಂತಹ ನೌಕರರು.
- ಕೇಂದ್ರ ಸರ್ಕಾರ , ರಾಜ್ಯ ಸರ್ಕಾರ, ಸಾರ್ವಜನಿಕ ಉದ್ದಿಮೆ ಅಥವಾ ರಾಷ್ಟ್ರೀಕರಣಗೊಂಡ ಬ್ಯಾಂಕ್‌ಗಳು ಕನಿಷ್ಠ ಶೇ.10 ರಷ್ಟು ಬಂಡವಾಳ ಹೂಡಿದ ಸಂಸ್ಥೆ / ಕಂಪನಿಗಳಲ್ಲಿ ಕಾರ್ಯನಿರ್ವಹಿಸುವವರು.
- ಸಹಕಾರಿ ಸಂಘಗಳ ಕಾಂಯ್ದೆಯ ಅಡಿಯಲ್ಲಿ ನೊಂದಾಯಿತ ಮತ್ತು ಕೇಂದ್ರ ಸರ್ಕಾರ /ರಾಜ್ಯ ಸರ್ಕಾರ / ಎಸ್ ಬಿ ಐ / ಆರ್ ಬಿ ಐ / ನಬಾರ್ಡ್ ಅಥವಾ ರಾಷ್ಟ್ರೀಕರಣಗೊಂಡ ಬ್ಯಾಂಕ್‌ಗಳಿಂದ ಭಾಗಶಃ/ಪೂರ್ಣವಾಗಿ ಅನುದಾನ ಒದಗಿಸುವ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರು.
- ಡೀಮ್ಡ್ ವಿಶ್ವವಿದ್ಯಾಲಯ ಮತ್ತು ನ್ಯಾಕ್ (NAAC) ನಿಂದ ಅಂಗೀಕೃತಗೊಂಡ ಶಿಕ್ಷಣಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಭಾರತೀಯ ವೈದ್ಯಕೀಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುವವರು.
- ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕಗಳಲ್ಲಿ ಕಾರ್ಯನಿರ್ವಹಿಸುವವರು.
- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಅಂಗೀಕೃತ ಶಿಕ್ಷಣಸಂಸ್ಥೆಗಳ ವೃತ್ತಿಪರ ಕೋರ್ಸಗಳಲ್ಲಿ ಪದವಿ, ಡಿಪ್ಲೊಮಾ, ಸ್ನಾತಕೋತ್ತರ ಪದವಿ/ ಡಿಪ್ಲೋಮಾ ಮುಗಿಸಿದವರು.
    - M.Tech, B.Tech/BE - **Engineers /** ಇಂಜನೀಯರ್/ ಅಭಿಯಂತರರು
    - MCA, BCA, PGDCA, DCA, BS, MS- Software Professionals / **Computer Applications**
    - MBA, BBM-Professionals of respective streams/ **Business Management** courses

- D.Pharm, B.Pharm, M.Pharm -**Pharmacist/Chemist**
- D.ed, B.Ed, M.Ed- **Teachers /** ಶಿಕ್ಷಣಕ್ಷೇತ್ರ
- B.Arch- **Architect** / ಕಲೆ
- MBBS, BHMS, BUMS, BAMS, BDS-**Doctors /** ವೈದ್ಯಕೀಯ ಕ್ಷೇತ್ರ
- B.Sc, M.Sc in Horticulture / Agriculture, Dairy science, Plant science, Agriculture & Food science, Agricultural biotechnology- **Agriculture and Horticulture /**ಕೃಷಿ & ತೋಟಗಾರಿಕೆ
- MBA, BBA in **Agriculture /** ಕೃಷಿ
- Diploma/PG in Journalism, BA in Journalism and other journalism related courses- **Journalism/** ಪತ್ರಿಕೋದ್ಯಮ
- BA in Hotel Management, catering and tourism, BBA in Hospitality, travel and tourism, B.Com in travel and tourism management- **Travel and Tourism Management/** ಸಾರಿಗೆ & ಪ್ರವಾಸೋದ್ಯಮ
- Bachelor of tourism administration- **Tourism Administration/** ಪ್ರವಾಸೋದ್ಯಮ
- BHMCT, DHMCT- **Hotel Management and Catering Technology /** ಹೋಟೇಲ್ ನಿರ್ವಹಣೆ ಮತ್ತು ಅಡುಗೆ ತಂತ್ರಜ್ಞಾನ
- BV.Sc, MV.Sc, BDS, DDT, DDM&OH, Diploma in Para-medical and dental courses- **Dental and Veterinary /** ದಂತ ಮತ್ತು ಪಶು ವೈದ್ಯಕೀಯ ಕ್ಷೇತ್ರ
- Bachelor of Fine arts- **Fine arts**
- Fashion design, Interior design, Web design, Sports science and technology, Gem (Government e-Marketplace), Jewelry and Diamond design, Textile design, Leather design, pilot, nutrition, Physiotherapy, Audiology, Speech therapy, Optometry, Fisheries, Home science, Food production, JBT(Junior Basic Training), Visual Communication.

❖ ನರ್ಸ, ಪ್ಯಾರಾಮೆಡಿಕಲ್ ಸಿಬ್ಬಂದಿ, ತಂತ್ರಜ್ಞರು, ಹಾಗೂ ಎಲ್ಲಾ ಸರ್ಕಾರಿ &ಖಾಸಗಿ ಆಸ್ಪತ್ರೆಯ ಕಾಯಂ ಸಿಬ್ಬಂದಿ.

❖ ಮುದ್ರಣ, ಎಲೆಕ್ಟ್ರಾನಿಕ್, ಮತ್ತು ಡಿಜಿಟಲ್ ಮಾಧ್ಯಮದ ಕಂಪನಿಗಳಲ್ಲಿ ಕಾರ್ಯನಿರ್ವಹಿಸುವ ಕಾಯಂ ಸಿಬ್ಬಂದಿ ಮತ್ತು ಪತ್ರಕರ್ತರು.

❖ ವಕೀಲರು ಮತ್ತು ಸ್ಟೇಟ್ ಬಾರ್ ಕೌನ್ಸಿಲ್ ನಲ್ಲಿಯ ಉದ್ಯೋಗಿಗಳು.

❖ ಕೇಂದ್ರ/ರಾಜ್ಯ ಸರ್ಕಾರಗಳಿಂದ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಬಗೆಯ ಐಟಿಐ ಕೋರ್ಸ ಮುಗಿಸಿದವರು.

❖ ಧಾರ್ಮಿಕ ದತ್ತಿ ಇಲಾಖೆಯಿಂದ ನಡೆಸಲ್ಪಡುವ ದೇವಸ್ಥಾನ ಮತ್ತು ಇತರೆ ಧಾರ್ಮಿಕ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳು.

❖ ಕೇಂದ್ರ/ರಾಜ್ಯ ಸರ್ಕಾರಗಳಿಂದ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಬಗೆಯ ಇಂಜನೀಯರಿಂಗ್ ಕೋರ್ಸ ಮುಗಿಸಿದವರು.

❖ ICAI/ICSI/ICWA ರಲ್ಲಿ ಕಾರ್ಯನಿರ್ವಹಿಸುವ ಚಾರ್ಟರ್ಡ ಅಕೌಂಟೆಂಟ್ ಗಳು, ಕಂಪನಿ ಸೆಕ್ರೆಟರಿ, ಕಾಸ್ಟ್ ಅಂಡ್ ವರ್ಕ ಅಕೌಂಟೆಂಟ್ ಗಳು.

(The Institute of Charted Accountants of India- ICAI
The Institute of Company Secretaries of India- ICSI
The Institute of Cost and Works Accountants of India- ICWA)

## ಹೂಡಿಕೆ ಮಾಡಬಹುದಾದ ಹಣ: (೧೦ ಸಾವಿರ ರೂ ಗುಣಕದಲ್ಲಿ)

ಕನಿಷ್ಟ : **20,000/-**

ಗರಿಷ್ಟ : **50** ಲಕ್ಷ

## ವಯೋಮಿತಿ :-

- ಮುಂದಿನ ಜನ್ಮದಿನಕ್ಕೆ ಅನುಗುಣವಾಗಿ ೧೮ ರಿಂದ ೫೫ವರ್ಷದೊಳಗಿನವರು ವೋಲ್ ಲೈಫ್ ಅಸ್ಸೂರನ್ಸ್ & ಎಂಡೋಮೆಂಟ್ ಅಸ್ಸೂರನ್ ಪಾಲಿಸಿ ತೆಗೆದುಕೊಳ್ಳಲು ಅರ್ಹರು. (WLA & EA)
- ಮನಿ ಬ್ಯಾಕ್ ಪಾಲಿಸಿಗೆ ಗರಿಷ್ಠ ೪೫ ವರ್ಷ. (AEA)
- ಯುಗಳ ಸುರಕ್ಷಾ ಪಾಲಿಸಿಗೆ ಕನಿಷ್ಠ ೨೧ ಗರಿಷ್ಠ ೪೫ ವರ್ಷ. (ದಂಪತಿಗಳಿಗೆ ಮಾತ್ರ)

## ಪಿ ಎಲ್ ಐ ಪಾಲಿಸಿಯ ಅನುಕೂಲಗಳು :-

- ಪಾಲಿಸಿ ಸ್ವೀಕೃತವಾದ ನಂತರದ ದಿನದಿಂದ ಸಾಮಾಜಿಕ ಜೀವನ ಭದ್ರತೆಯನ್ನು ಒದಗಿಸುತ್ತದೆ.
- ಪಿ ಎಲ್ ಐ ಪಾಲಿಸಿಯಲ್ಲಿ ತುಂಬಿದ ಹಣವು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ ೮೦(ಸಿ) ಅಡಿಯಲ್ಲಿ ರೂ. ೧.೫ ಲಕ್ಷ ವರೆಗೆ ತೆರಿಗೆ ರಿಯಾಯ್ತಿ ಪಡೆಯಬಹುದು.
- ಪಾಲಿಸಿ ಸ್ವೀಕೃತವಾದ ನಂತರ ಒಂದು ಬಾಂಡ್ ಮತ್ತು ಪ್ರೀಮಿಯಂ ಕಂತುಗಳನ್ನು ಕಟ್ಟಿದ ಪುರಾವೆಗಾಗಿ ಒಂದು ಪಾಸಬುಕ್ ನೀಡಲಾಗುವುದು.
- ಪಾಲಿಸಿ ಸ್ವೀಕೃತವಾಗಿ ಮೂರು ವರ್ಷಗಳ ನಂತರ ಚಾಲ್ತಿಯಲ್ಲಿ ಇರುವ & ಅಸೈನ್ ಮಾಡಲಾಗದ ಪಾಲಿಸಿಗಳಿಗೆ ಸಾಲಸೌಲಭ್ಯ ನೀಡಲಾಗುವುದು.
  - ವೋಲ್ ಲೈಫ್ ಅಶ್ಯೂರನ್ಸ್ – ೦೪ ವರ್ಷಗಳ ನಂತರ
  - ಎಂಡೋಮೆಂಟ್ ಅಶ್ಯೂರನ್ಸ್ – ೦೩ ವರ್ಷಗಳ ನಂತರ
  - ಕನ್ವೆರ್ಟಿಬಲ್ ವೋಲ್ ಲೈಫ್ ಅಶ್ಯೂರನ್ಸ್ – ೦೩ ವರ್ಷಗಳ ನಂತರ
  - ಎಂಟಿಸಿಪೆಟೆಡ್ ಎಂಡೋಮೆಂಟ್ ಅಶ್ಯೂರನ್ಸ್ – ಸಾಲ ಸೌಲಭ್ಯ ಇರುವುದಿಲ್ಲ
  - ಬಾಲ ಜೀವವಿಮೆ – ಸಾಲ ಸೌಲಭ್ಯ ಇರುವುದಿಲ್ಲ.

➢ **ಸಾಲ ಮಿತಿ**

ಸಾಲವನ್ನು ಸರೆಂಡರ್ ವ್ಯಾಲ್ಯೂಗೆ ಅನುಗುಣವಾಗಿ ಈ ಕೆಳಗಿನಂತೆ ನೀಡಲಾಗುತ್ತದೆ.

| | |
|---|---|
| ೦೩ ರಿಂದ ೦೫ ವರ್ಷ | – ೬೦% |
| ೦೫ ರಿಂದ ೧೦ ವರ್ಷ | – ೮೦% |
| ೧೦ ವರ್ಷಕ್ಕಿಂತ ಹೆಚ್ಚು | – ೯೦% |

ವೋಲ್ ಲೈಫ್ ಅಶ್ಯೂರನ್ಸ್ ಪಾಲಿಸಿ ಸಾಲಮಿತಿ

| | |
|---|---|
| ೪ ರಿಂದ ೭ ವರ್ಷ | ೬೦% |
| ೭ ರಿಂದ ೧೦ ವರ್ಷ | ೮೦% |
| ೧೦ ವರ್ಷಕ್ಕಿಂತ ಹೆಚ್ಚು | ೯೦% |

- **ಸರೆಂಡರ್ :**
    - ವೋಲ್ ಲೈಫ್ ಅಶ್ಯೂರನ್ಸ್ – ೦೩ ವರ್ಷಗಳ ನಂತರ /೩೬ ಕಂತು ತುಂಬಿದ ನಂತರ
    - ಎಂಡೋಮೆಂಟ್ ಅಶ್ಯೂರನ್ಸ್ – ೦೩ ವರ್ಷಗಳ ನಂತರ /೩೬ ಕಂತು ತುಂಬಿದ ನಂತರ
    - ಕನ್ವರ್ಟಿಬಲ್ ವೋಲ್ ಲೈಫ್ ಅಶ್ಯೂರನ್ಸ್ – ೦೩ ವರ್ಷಗಳ ನಂತರ /೩೬ ಕಂತು ತುಂಬಿದ ನಂತರ
    - ಎಂಟಿಸಿಪೆಟೆಡ್ ಎಂಡೋಮೆಂಟ್ ಅಶ್ಯೂರನ್ಸ್ – ಸರೆಂಡರ್ ಸೌಲಭ್ಯ ಇರುವುದಿಲ್ಲ
    - ಬಾಲ ಜೀವವಿಮೆ – ೦೫ ವರ್ಷಗಳ ನಂತರ ಸರೆಂಡರ್/ಪೆಡ್ ಅಪ್ ಮಾಡಿಸಬಹುದು.

    ಐದು ವರ್ಷಗಳ ನಂತರ ಸರೆಂಡರ್ ಮಾಡಿದರೆ ಮಾತ್ರ ಬೋನಸ್ ನೀಡಲಾಗುತ್ತದೆ ಮತ್ತು ಅದು ಸರೆಂಡರ್ ಫ್ಯಾಕ್ಟರಗೆ ಅನುಗುಣವಾಗಿ ನಿರ್ಧರಿತವಾಗುತ್ತದೆ.
- **ನಾಮನಿರ್ದೇಶನ ಸೌಲಭ್ಯ** ಮತ್ತು ಅಸೈನಮೆಂಟ್ ಸೌಲಭ್ಯ ಇರುತ್ತದೆ.
- **ರಿಬೇಟ್ ಸೌಲಭ್ಯ:** ಒಂದು ವರ್ಷದ ಕಂತನ್ನು ಮುಂಗಡವಾಗಿ ಕಟ್ಟಿದರೆ ೨% ರಿಬೇಟ್, ಆರು ತಿಂಗಳ ಕಂತನ್ನು ಮುಂಗಡವಾಗಿ ಕಟ್ಟಿದರೆ ೧% ರಿಬೇಟ್ ನೀಡಲಾಗುವುದು.
- **ಪುನಶ್ಚೇತನ (ರಿವೈವಲ್) ಸೌಲಭ್ಯ:** ಒಂದು ವೇಳೆ ಪ್ರೀಮಿಯಂ ಹಣವನ್ನು ಆರು ತಿಂಗಳುಗಳು ಕಾಲ ಕಟ್ಟದೇ ಇದ್ದ ಸಂದರ್ಭದಲ್ಲಿ ಅಗತ್ಯ ವೈದ್ಯಕೀಯ ಪ್ರಮಾಣಪತ್ರ ಮತ್ತು ದಂಡವನ್ನು ಕಟ್ಟುವ ಮೂಲಕ ನಿಷ್ಕ್ರಿಯ ಪಾಲಿಸಿಯನ್ನು ಪುನಶ್ಚೇತನ ಮಾಡಿಸಿಕೊಳ್ಳಬಹುದು.
- ಇಂಡಿಯಾ ಪೋಸ್ಟ್ ವೆಬ್ ಸೈಟ್ ನಲ್ಲಿ / ಪೋಸ್ಟ್ ಇನ್ಫೋ (Postinfo app) ನಲ್ಲಿ ಪಾಲಿಸಿಯ ಪ್ರೀಮಿಯಂ ಹಣವನ್ನು **ಆನ್ಲೈನ್ ಮುಖಾಂತರ ಕೂಡ** ಕಟ್ಟಬಹುದು.

## ೨೦೨೦-೨೧ ರ ಆರ್ಥಿಕ ವರ್ಷದ ಬೋನಸ್ ವಿವರ

| ಪಾಲಿಸಿ ವಿಧಗಳು | ಬೋನಸ್ ರೇಟ್ |
|---|---|
| ವೋಲ್ ಲೈಫ್ ಅಶ್ಯೂರನ್ಸ್ | ಒಂದು ಲಕ್ಷ ರೂ ಸಮ್ ಅಶ್ಯೂರ್ಡ್ ಗೆ ರೂ.7600/– |
| ಎಂಡೋಮೆಂಟ್ ಅಶ್ಯೂರನ್ಸ್ | ಒಂದು ಲಕ್ಷ ರೂ ಸಮ್ ಅಶ್ಯೂರ್ಡ್ ಗೆ ರೂ.5200/– |
| ಎಂಟಿಸಿಪೆಟೆಡ್ ಎಂಡೋಮೆಂಟ್ ಅಶ್ಯೂರನ್ಸ್ (AEA) | ಒಂದು ಲಕ್ಷ ರೂ ಸಮ್ ಅಶ್ಯೂರ್ಡ್ ಗೆ ರೂ.4800/– |
| ಕನ್ವರ್ಟಿಬಲ್ ವೋಲ್ ಲೈಫ್ ಅಶ್ಯೂರನ್ಸ್ | ವೋಲ್ ಲೈಫ್ ಅಶ್ಯೂರನ್ಸ್ ಪಾಲಿಸಿ ಬೋನಸ್ ಹಣ ಇದಕ್ಕೆ ಅನ್ವಯವಾಗುತ್ತದೆ. ಆದರೆ, ಪಾಲಿಸಿ ಉಂಬಳಿ ವಿಮೆಯಾಗಿ (ಎಂಡೋಮೆಂಟ್ ಅಶ್ಯೂರನ್ಸ್) ಪರಿವರ್ತನೆ ಆದ ನಂತರ ಉಂಬಳಿ ವಿಮೆಯ ಬೋನಸ್ ರೇಟ್ ಇದಕ್ಕೆ ಅನ್ವಯವಾಗುತ್ತದೆ. |
| ಟೆರ್ಮಿನಲ್ ಬೋನಸ್ | ಗರಿಷ್ಠ ರೂ.1000/– ವೋಲ್ ಲೈಫ್ ಅಶ್ಯೂರನ್ಸ್ ಪಾಲಿಸಿಗೆ ಮತ್ತು 20 ವರ್ಷ ಮತ್ತು ಅದಕ್ಕಿಂತ ಅಧಿಕ ಅವಧಿಯ ಉಂಬಳಿ ವಿಮೆಗೆ (ಎಂಡೋಮೆಂಟ್ ಅಶ್ಯೂರನ್ಸ್). |

## ಪಿ ಎಲ್ ಐ ಪಾಲಿಸಿಯ ವಿಧಗಳು:

### ೧. ಉಂಬಳಿ ವಿಮೆ (ಎಂಡೋಮೆಂಟ್ ಅಶ್ಯೂರೆನ್ಸ್– ಸಂತೋಷ)

- ಇದು ಅತ್ಯಂತ ಜನಪ್ರಿಯ ಯೋಜನೆಯಾಗಿದೆ ಮತ್ತು ಈ ಯೋಜನೆಯಲ್ಲಿ ಇನ್ಶೂರೆಂಟ್ ಬಯಸಿದ ವಯಸ್ಸಿಗೆ ಪಾಲಿಸಿ ಮೆಚ್ಯುರಿಟಿ ಹಣವನ್ನು ಪಡೆಯುವ ಅವಕಾಶ ನೀಡುತ್ತದೆ.
- ಇನ್ಶೂರೆಂಟ್ ಒಂದು ವೇಳೆ ಆಕಸ್ಮಿಕವಾಗಿ ಮರಣ ಹೊಂದಿದರೆ ನಾಮಿನಿಗೆ/ ಅಸೈನಿಗೆ/ ಕಾನೂನುಬದ್ಧ ಉತ್ತರಾಧಿಕಾರಿಗೆ ಲಭ್ಯವಾಗುವ ಒಟ್ಟು ಸಮ್ ಅಶ್ಯೂರ್ಡ್ ಅಮೌಂಟ್ ಅನ್ನು ನೀಡಲಾಗುವುದು.
- ವಯೋಮಿತಿ : ೧೯ ರಿಂದ ೫೫ ವರ್ಷಗಳು
- ಸಮ್ ಅಶ್ಯೂರ್ಡ್ ಅಮೌಂಟ್ : ೨೦ ಸಾವಿರದಿಂದ ೫೦ ಲಕ್ಷ ರೂ.
- ಪಾಲಿಸಿ ಸ್ವೀಕೃತವಾಗಿ ೦೩ ವರ್ಷಗಳ ನಂತರ ಚಾಲ್ತಿಯಲ್ಲಿರುವ ಪಾಲಿಸಿಗಳಿಗೆ ಸಾಲ ಸೌಲಭ್ಯ ಮತ್ತು ಸರೆಂಡರ್ ಮಾಡಿಕೊಳ್ಳಲು ಅವಕಾಶವಿದೆ.
- ೦೫ ವರ್ಷಗಳಿಗಿಂತ ಮೊದಲೇ ಸರೆಂಡರ್/ ಲೋನ್ ಅಸೈನ್ ಮಾಡಿದರೆ ಬೋನಸ್ ಹಣವನ್ನು ನೀಡಲಾಗುವುದಿಲ್ಲ.
- ೩೬ ತಿಂಗಳ ಕಂತನ್ನು ಕಟ್ಟಿ ಬಿಡುವ ಪಾಲಿಸಿಗಳನ್ನು ಪೇಡ್ ಅಪ್ ಮಾಡಿಸಿಕೊಳ್ಳಬಹುದು. (ಕಡಿಮೆ ಮಾಡಲಾದ ಸಮ್ ಅಶ್ಯೂರ್ಡ್ ಮತ್ತು ಅದಕ್ಕನುಗುಣವಾದ ಬೋನಸ್ ಹಣವನ್ನು ನೀಡಲಾಗುವುದು.

### ೨. ಅಜೀವ ವಿಮೆ (ಹೋಲ್ ಲೈಫ್ ಅಶ್ಯೂರೆನ್ಸ್ – ಸುರಕ್ಷಾ)

- ಅಜೀವ ವಿಮೆಯು ಇನ್ಶೂರೆಂಟ್ ೮೦ ವರ್ಷ ವಯಸ್ಸನ್ನು ತಲುಪಿದಾಗ ಅವರು ಬದುಕಿದ್ದರೆ ಅವರಿಗೆ ಇಲ್ಲವಾದಲ್ಲಿ ನಾಮಿನಿಗೆ / ಅಸೈನಿಗೆ/ ಕಾನೂನುಬದ್ಧ ಉತ್ತರಾಧಿಕಾರಿಗೆ ಸಮ್ ಅಶ್ಯೂರ್ಡ್ ಅಮೌಂಟ್ ಮತ್ತು ಬೋನಸ್ ಹಣವನ್ನು ನೀಡಲಾಗುವುದು.
- ವಯೋಮಿತಿ : ೧೯ ರಿಂದ ೫೫ ವರ್ಷಗಳು
- ಸಮ್ ಅಶ್ಯೂರ್ಡ್ ಅಮೌಂಟ್ : ೨೦ ಸಾವಿರದಿಂದ ೫೦ ಲಕ್ಷ ರೂ.
- ಅಜೀವ ವಿಮೆಯನ್ನು (ಹೋಲ್ ಲೈಫ್ ಅಶ್ಯೂರೆನ್ಸ್) ಉಂಬಳಿ ವಿಮೆಯನ್ನಾಗಿ (ಎಂಡೋಮೆಂಟ್ ಅಶ್ಯೂರೆನ್ಸ್) ಪಾಲಿಸಿ ಸ್ವೀಕೃತವಾಗಿ ೦೧ ವರ್ಷದ ನಂತರ ಅಥವಾ ಇನ್ಶೂರೆಂಟ್ ೫೭ ವರ್ಷ ವಯಸ್ಸನ್ನು ದಾಟುವ ಮೊದಲೇ ಪರಿವರ್ತಿಸಿಕೊಳ್ಳಲು ಅವಕಾಶವಿದೆ.
- ಪಾಲಿಸಿ ಸ್ವೀಕೃತವಾಗಿ ೦೪ ವರ್ಷಗಳ ನಂತರ ಚಾಲ್ತಿಯಲ್ಲಿರುವ ಪಾಲಿಸಿಗಳಿಗೆ ಸಾಲ ಸೌಲಭ್ಯ ಮತ್ತು ೦೩ ವರ್ಷಗಳ ನಂತರ ಪಾಲಿಸಿ ಸರೆಂಡರ್ ಮಾಡಿಕೊಳ್ಳಲು ಅವಕಾಶವಿದೆ.
- ೦೫ ವರ್ಷಗಳಿಗಿಂತ ಮೊದಲೇ ಸರೆಂಡರ್/ ಲೋನ್ ಅಸೈನ್ ಮಾಡಿದರೆ ಬೋನಸ್ ಹಣವನ್ನು ನೀಡಲಾಗುವುದಿಲ್ಲ.
- ೩೬ ತಿಂಗಳ ಕಂತನ್ನು ಕಟ್ಟಿ ಬಿಡುವ ಪಾಲಿಸಿಗಳನ್ನು ಪೇಡ್ ಅಪ್ ಮಾಡಿಸಿಕೊಳ್ಳಬಹುದು. (ಕಡಿಮೆ ಮಾಡಲಾದ ಸಮ್ ಅಶ್ಯೂರ್ಡ್ ಮತ್ತು ಅದಕ್ಕನುಗುಣವಾದ ಬೋನಸ್ ಹಣವನ್ನು ನೀಡಲಾಗುವುದು.

## ೩. ಪರಿವರ್ತಿಸುವ ಅಜೀವ ವಿಮೆ (ಕನ್ವೆರ್ಟೆಬಲ್ ವೋಲ್ ಲೈಫ್ ಅಶ್ಯೂರೆನ್ಸ್ – ಸುವಿಧಾ)

- ಅಜೀವ ವಿಮೆಯು ಇನ್ಶೂರೆಂಟ್ ೮೦ ವರ್ಷ ವಯಸ್ಸನ್ನು ತಲುಪಿದಾಗ ಅವರು ಬದುಕಿದ್ದರೆ ಅವರಿಗೆ ಇಲ್ಲವಾದಲ್ಲಿ ನಾಮಿನಿಗೆ / ಅಸೈನಿಗೆ/ ಕಾನೂನುಬದ್ಧ ಉತ್ತರಾಧಿಕಾರಿಗೆ ಸಮ್ ಅಶ್ಯೂರ್ಡ್ ಅಮೌಂಟ್ ಮತ್ತು ಬೋನಸ್ ಹಣವನ್ನು ನೀಡಲಾಗುವುದು.
- ವಯೋಮಿತಿ : ೧೯ ರಿಂದ ೫೫ ವರ್ಷಗಳು
- ಸಮ್ ಅಶ್ಯೂರ್ಡ್ ಅಮೌಂಟ್ : ೨೦ ಸಾವಿರದಿಂದ ೫೦ ಲಕ್ಷ ರೂ.
- ಪರಿವರ್ತಿಸುವ ಅಜೀವ ವಿಮೆಯನ್ನು (ಕನ್ವೆರ್ಟೆಬಲ್ ವೋಲ್ ಲೈಫ್ ಅಶ್ಯೂರೆನ್) ಉಂಬಳಿ ವಿಮೆಯನ್ನಾಗಿ (ಎಂಡೋಮೆಂಟ್ ಅಶ್ಯೂರೆನ್) ಪಾಲಿಸಿ ಸ್ವೀಕೃತವಾಗಿ ೦೫ ವರ್ಷಗಳ ಮೊದಲೇ ಮಾಡಿಕೊಳ್ಳಬೇಕು. ಒಂದು ವರ್ಷ ರಿಯಾಯ್ತಿಯ ಅವದಿಯನ್ನು ನೀಡಲಾಗುತ್ತದೆ.
- ಪಾಲಿಸಿ ಸ್ವೀಕೃತವಾಗಿ ೦೬ ವರ್ಷಗಳ ಮೊದಲೇ ಪರಿವರ್ತಿಸಿಕೊಳ್ಳದಿದ್ದರೆ ಪಾಲಿಸಿಯನ್ನು ಅಜೀವ ವಿಮೆ (ವೋಲ್ ಲೈಫ್ ಅಶ್ಯೂರೆನ್) ಎಂದು ಪರಿಗಣಿಸಲಾಗುವುದು.
- ಪರಿವರ್ತಿಸುವ ಅಜೀವ ವಿಮೆಯನ್ನು (ಕನ್ವೆರ್ಟೆಬಲ್ ವೋಲ್ ಲೈಫ್ ಅಶ್ಯೂರೆನ್) ಉಂಬಳಿ ವಿಮೆಯನ್ನಾಗಿ (ಎಂಡೋಮೆಂಟ್ ಅಶ್ಯೂರೆನ್) ಇನ್ಶೂರೆಂಟ್ ೫೫ ವರ್ಷ ವಯಸ್ಸನ್ನು ದಾಟುವ ಮೊದಲೇ ಪರಿವರ್ತಿಸಿಕೊಳ್ಳಬೇಕು.
- ಪಾಲಿಸಿ ಸ್ವೀಕೃತವಾಗಿ ೦೪ ವರ್ಷಗಳ ನಂತರ ಚಾಲ್ತಿಯಲ್ಲಿರುವ ಪಾಲಿಸಿಗಳಿಗೆ ಸಾಲ ಸೌಲಭ್ಯ ಮತ್ತು ೦೩ ವರ್ಷಗಳ ನಂತರ ಪಾಲಿಸಿ ಸರೆಂಡರ್ ಮಾಡಿಕೊಳ್ಳಲು ಅವಕಾಶವಿದೆ.
- ೦೫ ವರ್ಷಗಳಿಗಿಂತ ಮೊದಲೇ ಸರೆಂಡರ್/ ಲೋನ್ ಅಸೈನ್ ಮಾಡಿದರೆ ಬೋನಸ್ ಹಣವನ್ನು ನೀಡಲಾಗುವುದಿಲ್ಲ.
- ೩೬ ತಿಂಗಳ ಕಂತನ್ನು ಕಟ್ಟಿ ಬಿಡುವ ಪಾಲಿಸಿಗಳನ್ನು ಪೇಡ್ ಅಪ್ ಮಾಡಿಸಿಕೊಳ್ಳಬಹುದು. (ಕಡಿಮೆ ಮಾಡಲಾದ ಸಮ್ ಅಶ್ಯೂರ್ಡ್ ಮತ್ತು ಅದಕ್ಕನುಗುಣವಾದ ಬೋನಸ್ ಹಣವನ್ನು ನೀಡಲಾಗುವುದು.

## ೪. ಜಂಟಿ ವಿಮೆ (ಜಾಯಿಂಟ್ ಲೈಫ್ ಇನ್ಶೂರೆನ್ಸ್– ಯುಗಳ ಸುರಕ್ಷಾ)

- ಇದು ಜಂಟಿ ಉಂಬಳಿ ವಿಮಾ ಯೋಜನೆ ಆಗಿದ್ದು ದಂಪತಿಗಳಲ್ಲಿ ಒಬ್ಬರಾದರೂ ಪಿ ಎಲ್ ಐ ಪಡೆಯಲು ಅರ್ಹರಾಗಿರಬೇಕು.
- ಒಂದೆ ಪ್ರೀಮಿಯಂ ನಿಂದ ದಂಪತಿಗಳಿಬ್ಬರಿಗೂ ಅವರು ಮಾಡಿಸಿದ ಒಟ್ಟು ಸಮ್ ಅಶ್ಯೂರ್ಡ್ ಅಮೌಂಟ್ ನಷ್ಟು ಸಾಮಾಜಿಕ ಜೀವನ ಭದ್ರತೆ ದೊರೆಯುತ್ತದೆ.
- ವಯೋಮಿತಿ : ೨೧ ರಿಂದ ೪೫ ವರ್ಷಗಳು
- ದಂಪತಿಗಳಿಬ್ಬರೂ ವೈದ್ಯಕೀಯ ಪರೀಕ್ಷೆ ಮಾಡಿಸುವುದು ಕಡ್ಡಾಯವಾಗಿರುತ್ತದೆ.
- ಪಾಲಿಸಿ ಸ್ವೀಕೃತವಾಗಿ ೦೩ ವರ್ಷಗಳ ನಂತರ ಚಾಲ್ತಿಯಲ್ಲಿರುವ ಪಾಲಿಸಿಗಳಿಗೆ ಸಾಲ ಸೌಲಭ್ಯ ಮತ್ತು ಸರೆಂಡರ್ ಮಾಡಿಕೊಳ್ಳಲು ಅವಕಾಶವಿದೆ.
- ೦೫ ವರ್ಷಗಳಿಗಿಂತ ಮೊದಲೇ ಸರೆಂಡರ್/ ಲೋನ್ ಅಸೈನ್ ಮಾಡಿದರೆ ಬೋನಸ್ ಹಣವನ್ನು ನೀಡಲಾಗುವುದಿಲ್ಲ.
- ಈ ಪಾಲಿಸಿಂಯಲ್ಲಿ, ಒಟ್ಟು ಸಮ್ ಅಶ್ಯೂರ್ಡ್ ಅಮೌಂಟ್ಅನ್ನು ಪಾಲಿಸಿ ಅವಧಿ ಮುಗಿದ ನಂತರ ಅಥವಾ ಅದಕ್ಕಿಂತ ಮೊದಲೇ ದಂಪತಿಗಳಲ್ಲಿ ಒಬ್ಬರು ಜೀವ ಕಳೆದುಕೊಂಡಾಗಲೂ ನೀಡಲಾಗುವುದು.
- ಇನ್ಶೂರ್ಡ್ ಮಾಡಿಸಲಾದ ದಂಪತಿಗಳಲ್ಲಿ ಒಬ್ಬರೂ ತೀರಿದರೂ ಪ್ರೀಮಿಯಂ ಕಟ್ಟುವುದನ್ನು ನಿಲ್ಲಿಸಲಾಗುತ್ತದೆ. ಇಲ್ಲವಾದಲ್ಲಿ ಮೆಚ್ಯುರಿಟಿ ಆದ ನಂತರ ಹಣವನ್ನು ನೀಡಲಾಗುವುದು.

## ೫. ನಿರೀಕ್ಷಿತ ಉಂಬಳಿ ವಿಮೆ (ಎಂಟಿಸಿಪೇಟೆಡ್ ಎಂಡೋಮೆಂಟ್ ಅಶ್ಯೂರೆನ್ಸ್ – ಸುಮಂಗಲ)

- ನಿಯತಕಾಲಿಕವಾಗಿ ಲಾಭಾಂಶ ಪಡೆಯುವ ಪಾಲಿಸಿ ಇದಾಗಿದೆ.
- ಗರಿಷ್ಠ ವಿಮಾಬ ಮೊತ್ತ : ೫೦ ಲಕ್ಷ ರೂ.
- ಪಾಲಿಸಿ ಅವಧಿ ಮುಗಿಯುವವರೆಗೆ ಲೈಫ್ ರಿಸ್ಕ್ ಒಳಗೊಂಡಿರುತ್ತದೆ.
- ಸಾಲ ಸೌಲಭ್ಯ ಮತ್ತು ಸರೆಂಡರ್ ಸೌಲಭ್ಯ ಇರುವುದಿಲ್ಲ.
- ಕನಿಷ್ಠ ವಯಸ್ಸು : ೧೯ ವರ್ಷಗಳು
- ಗರಿಷ್ಠ ವಯಸ್ಸು : ೪೫ ವರ್ಷ–೧೫ ವರ್ಷದ ಪಾಲಿಸಿಗೆ,೪೦ ವರ್ಷ – ೨೦ ವರ್ಷದ ಪಾಲಿಸಿ ಇದ್ದರೆ.
- ಎರೆಡು ರೀತಿಯ ಪಾಲಿಸಿ ಇವೆ– ೧೫ ವರ್ಷದ ಅವಧಿಯ ಪಾಲಿಸಿ & ೨೦ ವರ್ಷದ ಅವಧಿಯ ಪಾಲಿಸಿ.
- ಇನ್ಶೂರೆಂಟ್‌ಗೆ ಲಾಭಾಂಶವನ್ನು ನಿಯತಕಾಲಿಕವಾಗಿ ಈ ಕೆಳಗಿನಂತೆ ನೀಡಲಾಗುತ್ತದೆ.

| ೧೫ ವರ್ಷದ ಪಾಲಿಸಿ | ೨೦ ವರ್ಷದ ಪಾಲಿಸಿ | ನಿಯತಕಾಲಿಕ ಲಾಭಾಂಶ |
|---|---|---|
| ೦೬ ನೇ ವರ್ಷದ ಕೊನೆಗೆ | ೦೮ ನೇ ವರ್ಷದ ಕೊನೆಗೆ | ಸಮ್ ಅಶ್ಯೂರ್ಡ್ ನ ಶೇ. ೨೦ ರಷ್ಟು |
| ೦೯ ನೇ ವರ್ಷದ ಕೊನೆಗೆ | ೧೨ ನೇ ವರ್ಷದ ಕೊನೆಗೆ | ಸಮ್ ಅಶ್ಯೂರ್ಡ್ ನ ಶೇ. ೨೦ ರಷ್ಟು |
| ೧೨ ನೇ ವರ್ಷದ ಕೊನೆಗೆ | ೧೬ ನೇ ವರ್ಷದ ಕೊನೆಗೆ | ಸಮ್ ಅಶ್ಯೂರ್ಡ್ ನ ಶೇ. ೨೦ ರಷ್ಟು |
| ೧೫ ನೇ ವರ್ಷದ ಕೊನೆಗೆ | ೨೦ ನೇ ವರ್ಷದ ಕೊನೆಗೆ | ಉಳಿದ ಶೇ. ೪೦ ರಷ್ಟು ಸಮ್ ಅಶ್ಯೂರ್ಡ್ ಮತ್ತು ಅಲ್ಲಿಯವರೆಗೆ ಲಭ್ಯವಾಗುವ ಬೋನಸ್ ಹಣ. |

## ೬. ಬಾಲ ಜೀವ ವಿಮೆ:

- ನಮ್ಮಲ್ಲಿ ವಿಮೆ ಪಾಲಿಸಿ ಮಾಡಿಸಿದವರ/ವಿಮಾದಾರರ ಗರಿಷ್ಟ ಎರೆಡು ಮಕ್ಕಳಿಗೆ ವಿಮೆ ನೀಡಲಾಗುತ್ತದೆ.
- ಪೋಷಕರ ವಯಸ್ಸು ಗರಿಷ್ಟ ೪೫ ವರ್ಷ ಮೀರಿರಬಾರದು.
- ಮಗುವಿನ ವಯಸ್ಸು ೫ ರಿಂದ ೨೦ ವರ್ಷದೊಳಗಿರಬೇಕು.
- ಸಮ್ ಅಶ್ಯೂರ್ : ಕನಿಷ್ಠ ೨೦ ಸಾವಿರ, ಗರಿಷ್ಠ ೦೩ ಲಕ್ಷ
- ಪಾಲಿಸಿದಾರರ ಗರಿಷ್ಠ ಸಮ್ ಅಶ್ಯೂರ್ಡ್ ಅಥವಾ ೦೩ ಲಕ್ಷ ಇದರಲ್ಲಿ ಯಾವುದು ಕಡಿಮೆಯೋ ಅದು ಮಗುವಿನ ಪಾಲಿಸಿಯ ಗರಿಷ್ಠ ಸಮ್ ಅಶ್ಯೂರ್‌ಹೊಂದಲು ಅವಕಾಶವಿದೆ.
- ಒಂದು ಮಗುವಿಗೆ ಒಂದು ಉಂಬಳಿ ವಿಮೆ ಪಾಲಿಸಿ ಹೊಂದಲು ಮಾತ್ರ ಅವಕಾಶ. ದತ್ತು ಪುತ್ರರಿಗೂ ಪಾಲಿಸಿ ತೆಗೆದುಕೊಳ್ಳಬಹುದು.
- ಮಗುವಿನ ವೈದ್ಯಕೀಯ ಪರೀಕ್ಷೆಯ ಅವಶ್ಯಕತೆ ಇರುವುದಿಲ್ಲವಾದರೂ ಮಗು ಆರೋಗ್ಯವಾಗಿರುವುದು ಅವಶ್ಯಕ.
- ಸದ್ಯ ಚಾಲ್ತಿಯಲ್ಲಿರುವ ಪೋಷಕರ ಪಾಲಿಸಿಯ ಅವಧಿ ಮತ್ತು ಒಟ್ಟು ಸಮ್ ಅಶ್ಯೂರ್ಡ್ ಮಗುವಿಗೆ ಮಾಡಿಸುವ ಪಾಲಿಸಿಗಿಂತ ಕಡಿಮೆ ಇರಬಾರದು.
- ಸಮ್ ಅಶ್ಯೂರ್ಡ್ ಮತ್ತು ಉಂಬಳಿ ವಿಮೆ ಪಾಲಿಸಿಯ ಬೋನಸ್ ಹಣವನ್ನು ಮೆಚ್ಯುರಿಟಿ ನಂತರ ಅಥವಾ ಅವಧಿಪೂರ್ವದಲ್ಲಿ ಮಗು ಮರಣ ಹೊಂದಿದಾಗ ಪಾವತಿಸಲಾಗುತ್ತದೆ.
- ಮುಖ್ಯ ಪಾಲಿಸಿದಾರ/ಪೋಷಕ ಅವಧಿಪೂರ್ವದಲ್ಲೇ ಮರಣ ಹೊಂದಿದರೆ, ಮಗುವಿನ ಪಾಲಿಸಿಯ ಇನ್ನುಳಿದ ಕಂತುಗಳನ್ನು ತುಂಬುವ ಅಗತ್ಯತೆ ಇರುವುದಿಲ್ಲ. ಪಾಲಿಸಿ ಅವಧಿ ಮುಗಿದ ನಂತರ ಮಗುವಿಗೆ ಮೆಚ್ಯುರಿಟಿ ಹಣವನ್ನು ಪಾವತಿಸಲಾಗುತ್ತದೆ.

- ಒಂದುವೇಳೆ ಮಗು ಮರಣ ಹೊಂದಿದರೆ, ಪಾಲಿಸಿಯನ್ನು ಅಲ್ಲಿಗೆ ಕೊನೆಗೊಳಿಸಿ ಒಟ್ಟು ಹಣವನ್ನು ಪೋಷಕ ಪಾಲಿಸಿದಾರರಿಗೆ ಪಾವತಿಸಲಾಗುತ್ತದೆ.
- ಒಂದುವೇಳೆ ಮಗು ಆತ್ಮಹತ್ಯೆ ಮಾಡಿಕೊಂಡರೆ ಯಾವುದೇ ರೀತಿಯ ಹಣವನ್ನು ಪಾವತಿಸಲಾಗುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ ಸಮೀಪದ ಅಂಚೆ ಕಛೇರಿಯನ್ನು ಸಂಪರ್ಕಿಸಿ**